ವಿದ್ಯಾರ್ಥಿ ನಿಲಯದ ವಿವರ	ವಿದ್ಯಾರ್ಥಿಗಳ ಸಂಖ್ಯೆ	ಜಾರಿಗೊಂಡ ವರ್ಷ
ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯ, ಜಮಖಂಡಿ ಟೌನ್	50	1993–94
ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ, ಜಮಖಂಡಿ ಟೌನ್	50	2001–02

ಈ) ಹೌದು.

ಉ) 2005–06ನೇ ಸಾಲಿನಲ್ಲಿ ವಿದ್ಯಾರ್ಥಿನಿಲಯಗಳ ಸಂಖ್ಯಾಬಲ ಹೆಚ್ಚಳಕ್ಕಾಗಿ, ಹೆಚ್ಚುವರಿ ಆಯವ್ಯಯ ಲಭ್ಯತೆಯನ್ನು ಆಧರಿಸಿ ಪರಿಶೀಲಿಸಲಾಗುವುದು.

4680 (5112) ಶ್ರೀ ಸಿದ್ದು ಸಾವದಿ (ಜಮಖಂಡಿ) :– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆ.ಹೆಚ್.ಡಿ.ಸಿ ನಿಗಮದ ಅಡಿಯಲ್ಲಿ ಕೆಲಸ ಮಾಡುವ ನೇಕಾರರ ಸಂಖ್ಯೆ ಎಷ್ಟು;

ಆ) ಇವರಿಗೆ ಉದ್ಯೋಗದ ಭರವಸೆ ಇದೆಯೇ; ಇದ್ದಲ್ಲಿ, ಅವುಗಳ ವಿವರಗಳೇನು;

ಇ) ವರ್ಷ ಪೂರ್ತಿ (12 ತಿಂಗಳು) ಉದ್ಯೋಗ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ;

ಈ) ಸರ್ಕಾರ ಪೋಷಣೆ ಮಾಡಿರುವ ನೇಕಾರರ ಪ್ಯಾಕೇಜ್ ನಲ್ಲಿ ನೇಕಾರರಿಗೆ ಬರುವ ಪ್ರಯೋಜನಗಳು ಯಾವುವು; ಎಂದಿನಿಂದ ಜಾರಿಗೊಳಿಸಲಾಗುವುದು;

ಉ) ವಿದ್ಯಾ ವಿಕಾಸ ಯೋಜನೆ, ಅಗ್ಗ ದರದ ಸೀರೆ, ಧೋತಿ, ಯೋಜನೆಗಳನ್ನು ಎಷ್ಟು ವರ್ಷಗಳವರೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ; ಮಾಡಿಕೊಳ್ಳದಿದ್ದಲ್ಲಿ, ಯಾವ ರೀತಿ ನೇಕಾರರಿಗೆ ಉದ್ಯೋಗದ ಭರವಸೆ ಕೊಡಲಾಗುವುದು;

ಊ) ಪವರ್‌ಲೂಮ್ ನೇಕಾರರಿಗೆ ಇದ್ದಂತಹ ವಿದ್ಯುತ್ ರಿಯಾಯಿತಿ, ಕೈಮಗ್ಗ ನೇಕಾರರಿಗೂ ಒದಗಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಡಾ॥ ಹೆಚ್. ಮಹದೇವಪ್ಪ (ಜವಳಿ ರಾಜ್ಯ ಸಚಿವರು) :

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ 12,675 ಕೈಮಗ್ಗಗಳು ಕಾರ್ಯ ನಿರ್ವಹಿಸುತ್ತಿವೆ.

ಆ) <u>ನೇಕಾರರಿಗೆ ನೀಡುವ ಉದ್ಯೋಗದ ವಿವರಗಳು</u> :

- ಕೈಮಗ್ಗ ನೇಕಾರರಿಂದ ವಿದ್ಯಾ ವಿಕಾಸ ಯೋಜನೆಯಡಿ ವಿತರಿಸುವ ಶಾಲಾ ಸಮವಸ್ತ್ರ ಬಟ್ಟೆಗಳನ್ನು ಉತ್ಪಾದಿಸುವುದು.
- ಸರ್ಕಾರವು 2005–06ನೇ ಸಾಲಿಗೆ ಅಗ್ಗದರದ ಸೀರೆ ಪಂಚೆ ವಿತರಣೆ ಯೋಜನೆಯನ್ನು ಮುಂದುವರೆಸಿ ಅನುಷ್ಠಾನಕ್ಕಾಗಿ ಆಯವ್ಯಯದಲ್ಲಿ ರೂ.300 ಲಕ್ಷಗಳನ್ನು ಒದಗಿಸಿದೆ.
- ಸರ್ಕಾರಿ/ಅರೆ ಸರ್ಕಾರಿ ಅಮಗ ಸಂಸ್ಥೆಗಳ ಬೇಡಿಕೆ ಬಟ್ಟೆಗಳನ್ನು ಉತ್ಪಾದಿಸುವುದು.
- ಮಾರುಕಟ್ಟೆ ಬೇಡಿಕೆಗನುಗುಣವಾಗಿ ಹೊಸ ಹೊಸ ವಿನ್ಯಾಸ ಮತ್ತು ಬಣ್ಣ ಸಂಯೋಜನೆಯ ಬಟ್ಟೆಯನ್ನು ಉತ್ಪಾದಿಸುವುದು.
- ರಫ್ತು ಮಾರುಕಟ್ಟೆಗೆ ಬೇಕಾದಂತಹ ಬಟ್ಟೆಯನ್ನು ಉತ್ಪಾದಿಸುವುದು ಮತ್ತು ಅದರ ಬೇಡಿಕೆಯನ್ನು ಪೂರೈಸುವುದು.

ಇ) 1) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಸಾರ್ವಜನಿಕ ಶಿಕ್ಷಣ ಇಲಾಖೆಗೆ ವಿದ್ಯಾವಿಕಾಸ ಯೋಜನೆಯಡಿ ಸರಬರಾಜು ಮಾಡಬೇಕಾದ ಸಮವಸ್ತ್ರ ಬಟ್ಟೆಗಳ ಬೇಡಿಕೆಯನ್ನು ಮುಂಗಡವಾಗಿ ಸಲ್ಲಿಸಲು ಪ್ರಸ್ತಾವನೆಯನ್ನು ಸಲ್ಲಿಸಿದೆ. ಸದರಿ ಯೋಜನೆಯಡಿ ಸಮವಸ್ತ್ರ ಬಟ್ಟೆಗಳನ್ನು ಸಕಾಲದಲ್ಲಿ ಸರಬರಾಜು ಮಾಡಲು ಹಾಗೂ ಉತ್ಪಾದನೆಯನ್ನು ಮುಂಗಡವಾಗಿ ಕೈಗೊಂಡು ಕೈಮಗ್ಗ ನೇಕಾರರಿಗೆ ನಿರಂತರವಾಗಿ ಉದ್ಯೋಗ ಒದಗಿಸಲು ಅನುಕೂಲವಾಗುವಂತೆ 3 ವರ್ಷಗಳ ಒಡಂಬಡಿಕೆ ಪತ್ರವನ್ನು ನೀಡುವಂತೆ ಶಿಕ್ಷಣ ಇಲಾಖೆಯೊಂದಿಗೆ ವ್ಯವಹರಿಸಿದ್ದು, ಅದು ಪರಿಶೀಲನೆಯಲ್ಲಿದೆ.

2) 2005–06ನೇ ಸಾಲಿನಲ್ಲಿ ಅಗ್ಗದರದ ಸೀರೆ ಮತ್ತು ಪಂಚೆ ಯೋಜನೆಯಡಿ ವಿತರಿಸುವ ಬಟ್ಟೆಗಳ ಉತ್ಪಾದನೆ ಕೈಗೊಳ್ಳಲು ಅನುವಾಗುವಂತೆ ಯೋಜನೆಯಡಿ ಮುಂಗಡ ಹಣವನ್ನು ಬಿಡುಗಡೆ ಮಾಡಲು ರೂ.3.00 ಕೋಟಿ ಮೊತ್ತವನ್ನು ಆಯವ್ಯಯದಲ್ಲಿ ಒದಗಿಸಿಕೊಳ್ಳಲಾಗಿದೆ.

3) ಸರ್ಕಾರಿ ಇಲಾಖೆಗಳಿಗೆ/ಅರೆ ಸರ್ಕಾರಿ ಇಲಾಖೆಗಳಿಗೆ ಬೇಕಾಗುವ ಬಟ್ಟೆಯನ್ನು ನಿಗಮದಿಂದ ಖರೀದಿಸುವಂತೆ ಕೋರಿ ಸಂಬಂಧಿಸಿದ ಇಲಾಖೆಗಳಿಗೆ ನಿಗಮವು ವಿನಂತಿಸಿದೆ.

ಈ) ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ನೇಕಾರಿಕೆಯನ್ನು ಪುನಃಶ್ಚೇತನಗೊಳಿಸಲು ಸರ್ಕಾರವು ಹಾಲಿ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆಗಳ ಜೊತೆಗೆ 2004–05ನೇ ಸಾಲಿಗೆ ದಿನಾಂಕ : 9–11–2004 ರಿಂದ ಜಾರಿಗೆ ಬರುವಂತೆ ನೇಕಾರರ ವಿಶೇಷ ಪ್ಯಾಕೇಜ್‌ನ್ನು ಘೋಷಿಸಿದ್ದು ಸೌಲಭ್ಯಗಳು ಈ ಕೆಳಕಂಡಂತಿವೆ :

• ವಿದ್ಯುತ್ ಮಗ್ಗ ನೇಕಾರರಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು (ರೂ.1.25 –10 ಹೆಚ್ ಪಿ ವರೆಗೆ ಮತ್ತು 10 ಮಗ್ಗಗಳಿಗಿಂತ ಕಡಿಮೆ. (ಈ ಸೌಲಭ್ಯವು ದಿನಾಂಕ : 10–2–2004 ರಿಂದ ಜಾರಿಗೆ ಬಂದಿರುತ್ತದೆ.)

• ಯಶಸ್ವಿನಿ ಯೋಜನೆಯಡಿ ನೇಕಾರರಿಗೆ ಆರೋಗ್ಯ ವಿಮೆ.

• ನೇಕಾರರು ರಾಜ್ಯ ವಲಯ ಹಾಗೂ ಜಿಲ್ಲಾ ವಲಯ ವ್ಯಾಪ್ತಿಗೆ ಬರುವ ಯೋಜನೆಗಳಡಿ ಸರ್ಕಾರದಿಂದ ಪಡೆದ ಸಾಲಗಳ ಮೇಲಿನ ಬಡ್ಡಿ ಹಾಗೂ ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದು.

• ಕೈಮಗ್ಗ ತಂತ್ರಜ್ಞಾನ ತರಬೇತಿ ಕೇಂದ್ರ, ಗದಗ್ ಮತ್ತು ಮುಂದುವರೆದ ಕೈಮಗ್ಗ ತರಬೇತಿ ಕೇಂದ್ರದ ಜಮಖಂಡಿ ರಿಕರಿಂಗ್ ವೆಚ್ಚಕ್ಕಾಗಿ ಸಹಾಯ.

• ಕೆಹೆಚ್‌ಡಿಸಿ ಮೂಲಕ ಕಚ್ಚಾಮಾಲು ಖರೀದಿಗಾಗಿ 12,000 ನೇಕಾರರಿಗೆ ದುಡಿಯುವ ಬಂಡವಾಳ ಸಹಾಯ.

• ಕೆಹೆಚ್‌ಡಿಸಿಗೆ ಮಾರ್ಜಿನ್ ಮನಿ ಸಹಾಯ.

ಊ) ವಿದ್ಯಾ ವಿಕಾಸ ಯೋಜನೆಯನ್ನು ಮುಂಬರುವ 3 ವರ್ಷಗಳವರೆಗೆ ವಿಸ್ತರಿಸಲು ಈಗಾಗಲೇ ಶಿಕ್ಷಣ ಇಲಾಖೆಯೊಂದಿಗೆ ವ್ಯವಹರಿಸಲಾಗಿದೆ. ಅಗ್ಗ ದರದ ಸೀರೆ, ಧೋತಿ, ಯೋಜನೆಯನ್ನು ಪ್ರಸ್ತುತ ಸಾಲಿಗೆ ಮುಂದುವರಿಸಿ ರೂ.3.00 ಕೋಟಿ ಮೊತ್ತವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಈ ಮೂಲಕ ನಿಗಮದಡಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲ ನೇಕಾರರಿಗೆ ನಿರಂತರವಾಗಿ ನೇಯ್ಗೆ ಉದ್ಯೋಗವನ್ನು ಕೊಡಲು ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ ಬಟ್ಟೆ ಉತ್ಪಾದಿಸಲು ಹೆಚ್ಚಿನ ಗಮನ ಹರಿಸುತ್ತಿದೆ.

ಋ) ಕೈಮಗ್ಗ ಚಾಲನೆಗೆ ವಿದ್ಯುತ್ ಅವಶ್ಯಕತೆ ಇರುವುದಿಲ್ಲವಾದ್ದರಿಂದ ವಿದ್ಯುತ್ ರಿಯಾಯಿತಿ ಪ್ರಶ್ನೆ ಉದ್ಭವಿಸುವುದಿಲ್ಲ.

4681 (5113) ಶ್ರೀ ಸಿದ್ದು ಸಾವದಿ (ಜಮಖಂಡಿ) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಾದ್ಯಂತ ಇರುವ ಪಶುಚಿಕಿತ್ಸಾಲಯಗಳೆಷ್ಟು ಮತ್ತು ಪಶುಆಸ್ಪತ್ರೆಗಳೆಷ್ಟು;

ಆ) ಪಶು ಚಿಕಿತ್ಸಾಲಯ ಮತ್ತು ಪಶುಆಸ್ಪತ್ರೆಗಳನ್ನು ಪ್ರಾರಂಭಿಸಲು ಇರುವ ನಿಯಮಾವಳಿಗಳೇನು;

ಇ) ಯಾವ ನಿಯಮಾನುಸಾರ ಈಗಿರುವ ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು;